# ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ

## ಕೆ.ಆರ್.ನಗರ

## ಸಿ.ಸಿ. 910/2020

**ಪಿಡಬ್ಲೂ-2**

**ಸಿಡಬ್ಲೂ-2**

| | | |
|---|---|---|
| ಸಾಕ್ಷಿದಾರರ ಹೆಸರು | - | ನಾಗರಾಜು |
| ತಂದೆಯ ಹೆಸರು | - | ಲೇಟ್ ರಂಗೇಗೌಡ |
| ವಯಸ್ಸು | - | 58 ವರ್ಷ |
| ಕೆಲಸ | - | ವ್ಯವಸಾಯ |
| ವಾಸ | - | ಹೆಬ್ಬಾಳು ಗ್ರಾಮ |

**ದಿನಾಂಕ 10-12-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.**

**ಮುಖ್ಯ ವಿಚಾರಣೆ ಮಾನ್ಯ ಎಪಿಪಿಯವರಿಂದ**

ಚಾಸಾ-1 ನನ್ನ ತಮ್ಮ. ಚಾಸಾ-3 ರಿಂದ 9 ಗೊತ್ತು. ಆರೋಪಿತರು ಗೊತ್ತು. ದಿಃ 19-07-2019 ರಲ್ಲಿ ನಾನು ಕಪ್ಪಡಿ ಕ್ಷೇತ್ರಕ್ಕೆ ಹೋಗಿದ್ದು ಆ ಕಡೆಯಿಂದ ವಾಹನ ಸಂಖ್ಯೆ ಕೆಎ 09 ಯು-4457 ಬಜಾಜ್ ನಲ್ಲಿ ಬರುತ್ತಿದ್ದಾಗ ಸಂಜೆ 6.30 ಗಂಟೆ ಸಮಯದಲ್ಲಿ ಎದುರುಗಡೆಯಿಂದ 1 ನೇ ಆರೋಪಿ ಸೋಮಶೇಖರ ತನ್ನ ವಾಹನ ಹಿರೋ ಹೊಂಡಾ ಬೈಕ್ ನಲ್ಲಿ ಬರುತ್ತಿದ್ದು ನಮ್ಮ ಬೈಕ್ ಗೆ ಗುದ್ದಿ ಅಪಘಾತ ಪಡಿಸಿರುತ್ತಾರೆ. ಸದರಿ ಅಪಘಾತದಲ್ಲಿ ನನ್ನ ಬಲಗಾಲಿನ 4 ಬೆರಳುಗಳನ್ನು ಕಳೆದುಕೊಂಡಿರುತ್ತೇನೆ.

ನಂತರ 1 ನೇ ಆರೋಪಿ ನನ್ನನ್ನು ಕೆ ಆರ್ ನಗರದ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಬಂದು ಚಿಕಿತ್ಸೆಯನ್ನು ಕೊಡಿಸಿ ಇಲ್ಲಿಂದ ಮೈಸೂರಿನ ಶಕ್ತಿ ಯು ವಿಲ್ ಆಸ್ಪತ್ರೆ ದಾಖಲಿಸಿ ಚಿಕಿತ್ಸೆಯನ್ನು ಕೊಡಿಸಿರುತ್ತಾರೆ. ನಂತರ ಚಾಸಾ-3 ರವರು ಸದರಿ ವಿಚಾರವನ್ನು ಚಾಸಾ-1 ರವರಿಗೆ ತಿಳಿಸಿದ್ದು, ಚಾಸಾ-1 ರವರು ಆಸ್ಪತ್ರೆಗೆ ಬಂದು ವಿಚಾರಿಸಿ ಮಾರನೇ ದಿನ ದಿಃ 21-01-2019 ರಂದು ಪೊಲೀಸ್ ಠಾಣೆಗೆ ತೆರಳಿ ಚಾಸಾ-1 ರವರು ದೂರನ್ನು ಕೊಟ್ಟಿರುತ್ತಾರೆ. ನಾನು ಈ

ಕುರಿತು ದಿಃ 02-08-2019 ರಂದು ನನ್ನ ಹೇಳಿಕೆಯನ್ನು ದಾಖಲು ಮಾಡಿರುತ್ತೇನೆ. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಆರೋಪಿತರನ್ನು ನೋಡಿದರೆ ಗುರುತಿಸುವುದಾಗಿ ತಿಳಿಸಿರುತ್ತಾರೆ. ಸಾಕ್ಷಿಗೆ 4 ಬೈಕ್ ನ ಛಾಯಾ ಚಿತ್ರಗಳನ್ನು ತೋರಿಸಿದ್ದು ಸಾಕ್ಷಿ ಅವುಗಳನ್ನು ನೋಡಿ ಗುರುತಿಸಿರುತ್ತಾರೆ.

ಈ ಹಂತದಲ್ಲಿ ಮಾನ್ಯ ಎಪಿಪಿಯವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೋರಿದ್ದರಿಂದ ಅನುಮತಿ ನೀಡಲಾಯಿತು.

**ಪಾಟೀ ಸವಾಲು ಮಾನ್ಯ ಎಪಿಪಿಯವರಿಂದಃ**

ದಿಃ20-07-2019 ರಂದು ಘಟನೆ ನಡೆದಿದೆ ಎಂದರೆ ಸರಿಯಲ್ಲ. ಸದರಿ ದಿನ ಸಂಜೆ 6.30 ಗಂಟೆ ಸಮಯದಲ್ಲಿ ನಾನು ನನ್ನ ಬಾಬ್ತು ವಾಹನ ಸಂಖ್ಯೆ ಕೆಎ-17-ಯು-4457 ನಂಬರಿನ ಬಜಾಜ್ ಸಿಟಿ 100 ವಾಹನದಲ್ಲಿ ನಾನು ಕಪ್ಪಡಿಗೆ ತೆರಳಿದ್ದು ಕಪ್ಪಡಿಯಿಂದ ವಾಪಸ್ ಊರಿಗೆ ಬರುತ್ತಿರುವಾಗ ಸಂಜೆ 6.30 ಗಂಟೆ ಸಮಯದಲ್ಲಿ ಹೆಬ್ಬಾಳು ಗ್ರಾಮದ ಕೆರೆಯ ಬಳಿ ಬರುತ್ತಿದ್ದಾಗ, ಎದುರುಗಡೆಯಿಂದ 1 ನೇ ಆರೋಪಿ ಸೋಮಶೇಖರ ಹೆಬ್ಬಾಳು ಕಡೆಯಿಂದ ಅತಿವೇಗ ಮತ್ತು ಅಜಾಗರೂಕತೆಯಿಂದ ತನ್ನ ಬೈಕ್ ಸಂಖ್ಯೆ ಕೆಎ 09-ಇಡಿ-844 ವಾಹನವನ್ನು ಓಡಿಸಿಕೊಂಡು ಬಂದು ಎದುರುಗಡೆಯಿಂದ ಬರುತ್ತಿದ್ದ ನನ್ನ ಬೈಕ್ ಗೆ ಡಿಕ್ಕಿ ಪಡಿಸಿದನು ಎಂದರೆ ಸರಿ.

ಸದರಿ ಅಪಘಾತದಲ್ಲಿ ನನ್ನ ಬಲಗಾಲಿನ ಪಾದಕ್ಕೆ ಪೆಟ್ಟಾಗಿ 4 ಬೆರಳುಗಳು ಅಂದರೆ ಬಲಗಾಲು ಹೆಬ್ಬೆರಳನ್ನು ಬಿಟ್ಟು ಉಳಿದ 4 ಬೆರಳುಗಳು ಶಾಶ್ವತವಾಗಿ ಇಲ್ಲದಂತಾಗಿದೆ ಎಂದರೆ ಸರಿ. ಅಪಘಾತ ಮಾಡಿದ ನಂತರ ನನ್ನನ್ನು ಆರೋಪಿ ಮೊದಲು ಕೆ ಆರ್ ನಗರದ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆಯನ್ನು ಕೊಡಿಸಿ ನಂತರ ನನ್ನನ್ನು ಮೈಸೂರಿನ ಶಕ್ತಿ ಹಿಲ್ ವಿವ್ ಆಸ್ಪತ್ರೆಗೆ ದಾಖಲು ಮಾಡಿ ಚಿಕಿತ್ಸೆಯನ್ನು ಆರೋಪಿ ಕೊಡಿಸಿರುತ್ತಾರೆ ಎಂದರೆ ಸರಿ.

ನಂತರ ದಿಃ 21-07-2019 ರಂದು ಸಂಜೆ 4.00 ಗಂಟೆ ಸಮಯದಲ್ಲಿ ನಿಪಿ-1 ರಂತೆ ಚಾಸಾ-1 ರವರು ಆರೊಪಿಯ ವಿರುದ್ಧ ಅಪಘಾತಕ್ಕೆ ಆರೋಪಿಯ ಅತಿವೇಗ ಮತುತ

ಅಜಾಗರೂಕತೆಯ ಚಾಲನೆಯೇ ಕಾರಣ ಎಂದು ದೂರನ್ನು ದಾಖಲು ಮಾಡಿರುತ್ತಾರೆ ಎಂದರೆ ಸರಿ.

**ಪಾಟೀ ಸವಾಲು ಶ್ರೀ ಕೆ.ಎಸ್.ಡಿ ಆರೋಪಿತರ ಪರ ವಕೀಲರು**

ನಾನು ಸದರಿ ದಿನ ಜಮೀನಿನ ಕೆಲಸಕ್ಕೆ ಹೋಗಿದ್ದು ಅದೇ ರೀತಿ ಕಪ್ಪಡಿ ಕ್ಷೇತ್ರಕ್ಕೂ ಸಹ ಹೋೀಗಿರುತ್ತೇನೆ. ಅದರೆ ನಾನು ಯಾವುದೇ ಸಾಮಗ್ರಿಗಳನ್ನು ತೆಗೆದುಕೊಂಡು ಬಂದಿರುವುದಿಲ್ಲ. ಪ್ರತಿವರ್ಷ ಫೆಬ್ರವರಿ ತಿಂಗಳಲ್ಲಿ ಕಪ್ಪಡಿ ಕ್ಷೇತ್ರದಲ್ಲಿ ವಿಶೇಷ ಪೂಜೆ ನಡೆಯುತ್ತವೆ ಎಂದರೆ ಸರಿ. ಬೇರೆ ದಿನಗಳಲ್ಲಿ ಸಂಜೆ 5.00 ಗಂಟೆಯ ಮೇಲೆ ಪೂಜೆಗಳು ಇರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಪೂಜೆಗಳು ಇರುತ್ತವೆ ಎಂದು ತಿಳಿಸಿರುತ್ತಾರ

ಹೆಬ್ಬಾಳು ಬಡಾವಣೆ ಕೆರೆಯಿಂದ ಮೇಲ್ಭಾಗದಲ್ಲಿ ಇದೆ. ಸಂಜೆ 6.30 ಗಂಟೆ ಸಮಯ ಎಂದರೆ ಮುಸ್ಸಂಜೆ ಯಾಗಿರುತ್ತದೆ. ಹೆಬ್ಬಾಳು ಬಡಾವಣೆಯವರು ಆ ಸಮಯದಲ್ಲಿ ಹೆಬ್ಬಾಳು ಮುಖ್ಯ ರಸ್ತೆಗೆ ಬರುತ್ತಾರೆ ಎಂದರೆ ಸರಿ. ಅದೇ ರೀತಿ ಕಪ್ಪಡಿ ತೆರಳುವವರು ಸಹ ಅದೇ ಮಾರ್ಗವಾಗಿ ಹೋೀಗಬೇಕು ಎಂದರೆ ಸರಿ. ಮುಖ್ಯ ರಸ್ತೆಯಿಂದ ಕಪ್ಪಡಿಯ ಕಡೆಗಾದಂತೆ ತಿರುವಿನಲ್ಲಿ ರಸ್ತೆಯಿದ್ದು ಅದರ ನಂತರ ಹೆಬ್ಬಾಳು ಬಡಾವಣೆ ಬರುತ್ತದೆ ಎಂದರೆ ಸರಿ.

ತಿರುವು ಮುಗಿದ ನಂತರ ಹೆಬ್ಬಾಳು ಬಡಾವಣೆಯ ರಸ್ತೆಯು ಸ್ವಲ್ಪ ಎತ್ತರದಲ್ಲಿದೆ ಎಂದರೆ ಸರಿ. ಅದೇ ರೀತಿ ಕಪ್ಪಡಿಯಿಂದ ಹೆಬ್ಬಾಳು ಮುಖ್ಯ ರಸ್ತೆಯಲ್ಲಿ ಬರುವಾಗ ಸದರಿ ರಸ್ತೆಯು ಇಳಿಜಾರಿನಿಂದ ಕೂಡಿದೆ ಎಂದರೆ ಸರಿ. ಆದ್ದರಿಂದ ಸಾಮಾನ್ಯವಾಗಿ ಕಪ್ಪಡಿ ಕ್ಷೇತ್ರಕ್ಕೆ ಹೆಬ್ಬಾಳು ರಸ್ತೆಯಿಂದ ತೆರಳಲು ರಸ್ತೆ ಎತ್ತರದಲ್ಲಿರುವ ಕಾರಣ ಮತ್ತು ತಿರುವಿನಲ್ಲಿರುವ ಕಾರಣ ನಿಧಾನವಾಗಿ ಸಂಚರಿಸುತ್ತಾರೆ ಎಂದರೆ ಸರಿ.

ಅದೇ ರೀತಿ ಕಪ್ಪಡಿಯಿಂದ ಬರುವ ವಾಹನಗಳು ಇಳಿಜಾರಿನ ಕಾರಣ ವೇಗವಾಗಿ ಬರುತ್ತವೆ ಎಂದರೆ ಸರಿ. 1 ನೇ ಆರೋಪಿ ಹೆಬ್ಬಾಳು ಬಡಾವಣೆಯ ವಾಸಿ. ಸದರಿ

ಆರೋಪಿ ಸ್ವಂತ ವಾಹನಗಳನ್ನು ಇಟ್ಟುಕೊಂಡು ಉತ್ತಮವಾಗಿ ಚಾಲನೆ ಮಾಡುತ್ತಾನೆ ಎಂದರೆ ಸರಿ. ಸದರಿ ದಿನ ಆರೋಪಿ ನಿಧಾನವಾಗಿ ಸಂಚರಿಸುತ್ತಿದ್ದರು ಸಹ ನಾನು ಕಪ್ಪಡಿ ಕ್ಷೇತ್ರದಿಂದ ಇಳಿಜಾರಿನ ಮಾರ್ಗವಾಗಿ ವೇಗವಾಗಿ ಬಂದ ಕಾರಣ ನಿಯಂತ್ರಣ ತಪ್ಪಿ ಬಿದ್ದಿರುತ್ತೇನೆ ಎಂದರೆ ಸರಿಯಲ್ಲ.

ನಾನು ಕಳೆದ 10 ವರ್ಷಗಳಿಂದ ವಾಹನವನ್ನು ಚಲಾಯಿಸುತ್ತಿದ್ದೇನೆ. ಈ ಹಿಂದೆ ಬೇರೆ ವಾಹನಗಳನ್ನು ಓಡಿಸಿ ನಂತರ ಸ್ವಂತ ವಾಹನವನ್ನು ಖರೀದಿಸಿರುತ್ತೇನೆ. ನನಗೆ ವಾಹನವನ್ನು ಚಲಾಯಿಸಲು ಚಾಲನಾ ಪರವಾನಿಗೆಯನ್ನು ಕೊಟ್ಟಿರುವುದಿಲ್ಲ. ನಾನು ಅರ್ಜಿಯನ್ನು ಹಿಂದೆಯೇ ಸಲ್ಲಿಸಿದ್ದು ಅವರು 50 ವರ್ಷವಯಸ್ಸು ಆಗಿರುತ್ತದೆ ಎಂದು ತಿಳಿಸಿ ಅರ್ಜಿಯನ್ನು ನಿರಾಕರಿಸಿರುತ್ತಾರೆ. ನಮ್ಮ ವಾಹನಕ್ಕೆ  ವಿಮೆಯನ್ನು ಸಹ ಮಾಡಿಸಿಲ್ಲ ಎಂದರೆ ಸರಿ. ನನಗೆ  10 ವರ್ಷಗಳ ಹಿಂದೆ ಸರಿಯಾಗಿ  ವಾಹನವನ್ನು ಚಾಲಾಯಿಸಲು ಬಾರದ ಕಾರಣ ವಾಹನ ಚಾಲನಾ ಪರವಾನಿಗೆಯನ್ನು ನೀಡಿಲ್ಲ ಎಂದರೆ ಸರಿಯಲ್ಲ.

ಆರೋಪಿ ಸರಿಯಾಗಿ ವಾಹನವನ್ನು ಚಲಾಯಿಸಿದ್ದರೂ ಸಹ ನಾನೇ ವಾಹನವನ್ನು ಸರಿಯಾಗಿ ಚಲಾಯಿಸಲು ಬಾರದೇ ಬಿದ್ದು ಸುಳ್ಳು ದೂರನ್ನು ದಾಖಲು ಮಾಡಿರುತ್ತೇನೆ ಎಂದರೆ ಸರಿಯಲ್ಲ. ಯಾವುದೇ ಅಪಘಾತದಲ್ಲಿ ದ್ವಿಚಕ್ರ ವಾಹನಗಳು  ಕೆಳಗಡೆ ಬಿದ್ದಾಗ ಜಖಂಗೊಳ್ಳುತ್ತವೆ ಎಂದರೆ ಸರಿ. ಆರೋಪಿಯ ವಾಹನಕ್ಕೆ ಯಾವುದೇ ಜಖಂ ಸಂಭವಿಸಿರುವುದಿಲ್ಲ.

ಒಂದು ವೇಳೆ ಆರೋಪಿ ಜೋರಾಗಿ ಮತ್ತು ವೇಗವಾಗಿ ಚಲಾಯಿಸಿಕೊಂಡು ಬಂದು ಅಪಘಾತ ಪಡಿಸಿದ್ದರೆ  ಜಖಂ ಆಗುತ್ತಿತ್ತು ನಾನೇ  ಜೋರಾಗಿ ವಾಹನವನ್ನು ಚಲಾಯಿಸಿ ಪರವಾನಿಗೆಯನ್ನು ಹೊಂದದೇ ವಾಹನವನ್ನು ಚಲಾಯಿಸಿ ಅಪಘಾತ ಪಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ವಾಹನ ತುಂಬಾ ಹಳೆಯ ವಾಹನ ಎಂದರೆ ಸರಿ. ಸದರಿ ವಾಹನವನ್ನು ಜಮೀನಿನಲ್ಲಿರುವ ಹುಲ್ಲನ್ನು ತರಲು ಉಪಯೋಗಿಸುತ್ತೇವೆ ಎಂದರೆ ಸರಿ.

ಅಪಘಾತವಾಗಿದೆ ಎಂದು ಹೇಳಿದ ಸ್ಥಳದ ಸುತ್ತಮುತ್ತ ಮನೆಗಳು ಇವೆ ಎಂದರೆ ಸರಿಯಲ್ಲ. ಸದರಿ ಅಪಘಾತಕ್ಕೂ ಮತ್ತು ಆರೋಪಿಗೂ ಯಾವುದೇ ಸಂಬಂಧ ಇರದೇ

ಇದ್ದರೂ ಸಹ ಸುಳ್ಳು ದೂರನ್ನು ಕೊಟ್ಟು ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ</u> - ಇರುವುದಿಲ್ಲ

**(ನನ್ನ ಉಕ್ತ ಲೇಖನದ ಮೇರೆಗೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)**

ಓ ಹೇ ಕೇ ಸ ಇದೆ ಎಂ

**(ಚಂದನ ಎಸ್ )**

ಪ್ರಧಾನ ಸಿವಿಲ್ ನ್ಯಾಯಾಧೀಶರು,

ಮತ್ತು ಪ್ರದನ್ಯಾದಂ., ಕೆ.ಆರ್.ನಗರ